ನೋಡುವುದೇ ಬೇಡ. ಅಡಿಗೆ... ತಿಂಡಿ ಮಾಡಿದರೆ ಉಂಟು. ಇಲ್ಲವಾದರೆ ನೇತ್ರಾ ಕೈಯಿಂದ ಸಾಧ್ಯವಾದಷ್ಟು ಮಾಡುತ್ತಿದ್ದಳು. ಅವಳಿಗೆ ಪರೀಕ್ಷೆ ಇದ್ದರೆ ಸಂಜಯನೇ ಅನ್ನ, ಸಾರು ಮಾಡಿ ಚಪಾತಿ, ಪಲ್ಯ ತಂದಿಡುತ್ತಿದ್ದ. ಸಂಜಯನ ಸ್ನೇಹಿತರು "ಬ್ಯಾಡ ಸಂಜೂ... ವೈನಿ ಭಾಳ ಘಾಬರ್‍ಯಾಗಿ ಮಂಕಾಗ್ಯಾರ. ಸುಮ್ಮನ ಸೈಕ್ಯಾಟ್ರಿಸ್ಟ್ ಕಡೆ ಕರಕೊಂಡ್ಹೋಗು..." ಎಂದರು. ಇನ್ನೂ ಗಾಬರಿಯಾದ ಸುಜಾತ, "ಸೈಕ್ಯಾಟ್ರಿಸ್ಟ್ ಕಡೆ ಹೋಗಲಿಕ್ಕೆ ನನಗೇನು ಹುಚ್ಚ ಹಿಡದದೇನ್ರಿ?" ಎಂದು ಕೇಳಿದಳು ಕಣ್ತುಂಬಿ. "ಇಲ್ಲ ಹುಚ್ಚಿ.. ಮನಸ್ಸಿಗೆ ತ್ರಾಸಾಗಿದ್ದರ ಅವರು ಔಷಧ ಕೊಡತಾರ. ಬಾ" ಎಂದು ಕರೆದೊಯ್ದ. ಅವನಾದರೂ ಏನು ಮಾಡಬಹುದಿತ್ತು. ಸಾಧ್ಯವಿದ್ದದ್ದನ್ನೆಲ್ಲ ಪ್ರಯೋಗ ಮಾಡಿ ಆಗಿತ್ತು. ಯಾರೋ ಮಂತ್ರ, ಮಾಟದ ಬಗ್ಗೆ ಹೇಳಿದ್ದರು. ಅದರ ಸಹವಾಸವೇ ಬೇಡವೆಂದು ಮಾನಸಿಕ ತಜ್ಞರ ಬಳಿಗೆ ಬಂದ. ಡಾಕ್ಟರ್ ಪಳನಿಸ್ವಾಮಿ ಅವಳನ್ನು ಪರೀಕ್ಷಿಸಿ ಎಲ್ಲಾ ಲಕ್ಷಣಗಳನ್ನು ತಿಳಿದುಕೊಂಡು ಕೆಲವು ಪ್ರಶ್ನೆಗಳನ್ನು ಕೇಳಿದರು. ಕೊನೆಗೆ ಮಾತ್ರೆಗಳನ್ನು ಬರೆದುಕೊಟ್ಟು, "ಧೈರ್ಯವಾಗಿರಿ... ಆರಾಮಾಗಿರಿ. ಕನಸುಗಳೆಲ್ಲ ನಿಜವಾಗಲ್ಲ. ಹಾಗೆ ಕಂಡ ಕನಸುಗಳೆಲ್ಲ ಸತ್ಯವಾಗುವದಾಗಿದ್ದರೆ ಈ ಭೂಮಿ ಹೀಗೆ ಇರ್ತಿರ್ಲಿಲ್ಲ. ಆದಷ್ಟು ಉಲ್ಲಾಸದಿಂದಿರಿ" ಎಂದು ಹೇಳಿ ಬೀಳ್ಕೊಟ್ಟರು. ಆ ಮಾತ್ರೆಗಳಿಂದ ಗಮನಾರ್ಹ ಬದಲಾವಣೆಯಾದದ್ದು ನಿಜ. ಚೆನ್ನಾಗಿ ನಿದ್ದೆ ಮಾಡುತ್ತಿದ್ದಳು. ಊಟ, ತಿಂಡಿಗಳೂ ಮಾಮೂಲಾದವು. ಈಗಲೂ ಅವಳಿಗೆ ಕನಸುಗಳು ಬೀಳುತ್ತಿದ್ದವು. ಆದರೆ ಸುಂದರವಾದ ಕನಸುಗಳು... ಮಂಗಳವಾದ್ಯಗಳು ಮೊಳಗಿದಂತೆ... ಯಾರದೋ ಮದುವೆ... ಧಾರೆ ನಡೆದಂತೆ... ಎಲ್ಲೋ ಸಂಗೀತ ಕಛೇರಿಯಾದಂತೆ... ಸಂತೋಷವಾಗಿದ್ದಳು. ಕೋರ್ಸ್ ಮುಗಿಯುತ್ತಿದ್ದಂತೆ ಸುಧಾರಿಸಿದಳು. ಸಂಜಯ ಮತ್ತು ಮಕ್ಕಳೂ ಆನಂದಿತರಾದರು. ವೈದ್ಯರೂ ಮತ್ತೆ ಕೆಲವು ದಿನಗಳ ಕೋರ್ಸ್ ಕೊಟ್ಟು "ತುಂಬಾ ತೆಗೆದುಕೊಂಡರೆ ಅಡಿಕ್ಷನ್ ಆಗುತ್ತೆ. ಸಾಕು" ಎಂದಿದ್ದರು. ಮಕ್ಕಳ ಪರಿಕ್ಷೆಯ ಸಮಯದಲ್ಲಿ

